# ಗುಜರಿ ಅಂಗಡಿಯ ಆಂಟಿಕ್ ಪೀಸ್‌ಗಳು

ಎಷ್ಟು ಮಾತು ಅವು
ಕೈ ಕೈ ಹಿಡಿದು ಸಾಗುತ್ತಿದ್ದರೆ
ರಸ್ತೆಗಳೆ ಚಿಕ್ಕವು

ಸಾಗರದ ದಡ ಪರ್ವತದ ತುದಿ
ದೇಗುಲದ ಕಟ್ಟೆ ಪಾರ್ಕಿನ ಬೆಂಚು ಎಲ್ಲಕೂ ಮಾತು ಕಲಿಸಿದೆವು

ನಿತ್ಯ ಗದರುತ್ತಿದ್ದ ಪಾರ್ಕಿನ ಗಾರ್ಡು
ಸೆಕೆಂಡ್ ಶೋ ನಂತರ ಅರ್ಧ ದಾರಿಯಲ್ಲಿ ತಡೆಯುತ್ತಿದ್ದ ಪೊಲೀಸಪ್ಪ
ಗುರ್ರ್ ಎನ್ನುತ್ತಿದ್ದ ವಾರ್ಡನ್
ಎಲ್ಲರೂ ಪ್ರೀತಿಸುವುದ ಕಲಿತುಬಿಟ್ಟರು

ಬೈಟೂ ಕಾಫೀ ಮುಂದಿಟ್ಟುಕೊಂಡು
ಏನು ಮಾತಾಡಿದೆವೊ ನಿತ್ಯ ಸಂಜೆಗಳು ಹೇಗೆ ಸರಿದವೊ
ಇಂದು ಎಂಬುದು ಬಹು ದೊಡ್ಡ ಅಚ್ಚರಿ
ನಾವೀಗ ಮನೆ ಕಟ್ಟಿಕೊಂಡಿದ್ದೇವೆ
ಸರಿ ಹೊತ್ತಿಗೆ ಟೀ ಕಾಫೀ ಎಲ್ಲ ಸಲ್ಲುತ್ತವೆ
ಯಾವುದಕ್ಕೆ ಕೊರತೆಯಿದೆ

